ಆ) ಸಕಲೇಶಪುರ ತಾಲ್ಲೂಕಿನಲ್ಲಿ ಮಾವಿನಹಳ್ಳಿ ಏತ ನೀರಾವರಿ ಯೋಜನೆಯನ್ನು ಮೈಸೂರಿನ ಕಾವೇರಿ ಜಲಾನಯನ ಏತ ನೀರಾವರಿ ನಿಗಮದಿಂದ ತೆಗೆದುಕೊಳ್ಳಲು ಉದ್ದೇಶಿಸಲಾಗಿದ್ದು ಈ ಯೋಜನೆಯು ಆನ್ವೇಷಣಾ ಹಂತದಲ್ಲಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರವಾಸೋದ್ಯಮಗಳಂ

೧೧೯೨. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಯೋಜನಾ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ವಿದೇಶಿ ನೆರವು ಬಂದಿದೆಯೇ, ಇಲ್ಲವಾದಲ್ಲಿ ಶೀಘ್ರ ದೊರಕುವುದೇ ಹಾಗಿದ್ದಲ್ಲಿ ಎಲ್ಲಿಂದ ಪಡೆಯಲಾಗುವುದು.

ಆ) ದಕ್ಷಿಣ ಕನ್ನಡದಲ್ಲಿ ಎಲ್ಲೆಲ್ಲಿ ಪ್ರವಾಸಿ ಧಾಮಗಳನ್ನು ಸ್ಥಾಪಿಸಲಾಗುವುದು ಅದರ ಕಾರ್ಯಾರಂಭ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವರು:—

ಅ) ವಿದೇಶಿ ನೆರವು ಬಂದಿರುವುದಿಲ್ಲ, ಆದರೆ, ಕೇಂದ್ರ ಪ್ರವಾಸೋದ್ಯಮ ಇಲಾಖೆಯ ಮಾರ್ಗದರ್ಶನದಂತೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ಎಂಬ ಯೋಜನೆಯನ್ನು ತಯಾರಿಸಿ ಜಪಾನ್ ದೇಶದ ಸಾಗರೋತ್ತರ ಆರ್ಥಿಕ ಸಹಕಾರ ನಿಧಿ ಸಂಸ್ಥೆಗೆ ಸಾದರಪಡಿಸಲಾಗಿದೆ.

ಆ) ಅಂತಿಮವಾಗಿ ನಿರ್ಣಯವಾಗಿರುವುದಿಲ್ಲ.

ಜಿಲ್ಲಾ ಪರಿಷತ್ತಿನ ಸ್ಥಾಪನೆಗಿಂತ ಮೊದಲು ಮಂಗಳೂರು ತಾಲ್ಲೂಕಿನಲ್ಲಿ ಲೋಕೋಪಯೋಗಿ ಕಾಮಗಾರಿಗಳಂ

೧೧೯೦ ಶ್ರೀ ಇದಿನಬ್ಬ (ಉಳ್ಳಾಲ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೮೬ನೇ ಏಪ್ರಿಲ್‌ನಿಂದ ೧೯೯೦ನೇ ಮಾರ್ಚ್ ಅಖೈರ್‌ವರೆಗೆ ಮಂಗಳೂರು ತಾಲ್ಲೂಕಿನಲ್ಲಿ ಮಂಜೂರಾದ ರಸ್ತೆ ಮತ್ತು ಸೇತುವೆ ಕೆಲಸಗಳ ಸಂಖ್ಯೆ ಎಷ್ಟು; ಅವುಗಳ ಒಟ್ಟು ಹಣವೆಷ್ಟು ?

ಆ) ಆ ಪೈಕಿ ಪೂರ್ಣವಾದ ರಸ್ತೆ ಮತ್ತು ಸೇತುವೆಗಳಷ್ಟು ; ಅರ್ಧದಲ್ಲಿ ನಿಲ್ಲಿಸಲ್ಪಟ್ಟ ರಸ್ತೆ ಮತ್ತು ಸೇತುವೆ ಎಷ್ಟು ?

ಇ) ಕೆಲಸಪನ್ನೇ ಪ್ರಾರಂಭ ಮಾಡಿದ ರಸ್ತೆಗಳು ಯಾವುದು, ಸೇತುವೆಗಳ ಸಂಖ್ಯೆ ಎಷ್ಟು ; (ಸ್ಥಳಗಳ ವಿವರ ನೀಡುವುದಂ) ಇದಕ್ಕೆ ಹೀಗಾಗಲು ಕಾರಣಗಳೇನಂ ?

ಶ್ರೀ ಬಿ. ಪುಟ್ಟಸ್ವಾಮಿಗೌಡ, (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು).—

ಅ) ಮಂಗಳೂರು ತಾಲ್ಲೂಕಿನಲ್ಲಿ ೧೯೮೬ನೇ ಏಪ್ರಿಲ್‌ನಿಂದ ೧೯೯೦ನೇ ಮಾರ್ಚ್‌ವರೆವಿಗೆ ೪೬ ರಸ್ತೆ ಕಾಮಗಾರಿಗಳು ಹಾಗೂ ಒಂದು ಸೇತುವೆ ಕಾಮಗಾರಿ ಮಂಜೂರಾಗಿದೆ. ಇವುಗಳ ಒಟ್ಟು ಹಣ ೧೩೯.೭೧ ಲಕ್ಷ ರೂ.ಗಳು. ಇವುಗಳಲ್ಲಿ ಈಗ ೪೪ ರಸ್ತೆ ಮತ್ತು ಒಂದು ಸೇತುವೆ ಕಾಮಗಾರಿಗಳು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುತ್ತದೆ. ಎರಡು ರಸ್ತೆ ಕಾಮಗಾರಿಗಳು ಮಾತ್ರ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತದೆ.

ಆ) ಲೋಕೋಪಯೋಗಿ ಇಲಾಖೆಯ ಎರಡು ರಸ್ತೆ ಕಾಮಗಾರಿಗಳು ಹಾಗೂ ಜಿಲ್ಲಾ ಪರಿಷತ್ ವ್ಯಾಪ್ತಿಯ ೯ ರಸ್ತೆ ಕಾಮಗಾರಿಗಳೂ ಪೂರ್ಣಗೊಂಡಿವೆ. ಉಳಿದ ೩೫ ರಸ್ತೆ ಕಾಮಗಾರಿಗಳು ಹಾಗೂ ೧ ಸೇತುವೆ ಕಾಮಗಾರಿ ಅನುದಾನದ ಕೊರತೆಯಿಂದ ಪೂರ್ಣಗೊಂಡಿರುವುದಿಲ್ಲ.

ಇ) ಮಂಜೂರಾಗಿ ಪ್ರಾರಂಭಿಸದೆ ಇರುವಂತಹ ಕಾಮಗಾರಿಗಳು ಯಾವುದೂ ಇಲ್ಲ. ಆದ್ದರಿಂದ ಕಾರಣಗಳ ಬಗ್ಗೆ ಪ್ರಶ್ನೆ ಉದ್ಭವಿಸುವುದಿಲ್ಲ.